**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 764/2025</u>**

ದಿನಾಂಕಃ. **25.04.2026** ರಂದು ಸಾಕ್ಷಿಗೆ ಮದ್ಯಾಹ್ನ **12.35** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

ಚಾಸಾ-**3** ಪ್ರಾಸಾ-**4**

| | | |
|---|---|---|
| ಹೆಸರು | - | ವೆಂಕಟೇಶ್ |
| ತಂದೆ ಹೆಸರು | - | ರಾಜಾಮಣಿ |
| ವಯಸ್ಸು | - | **56** |
| ಉದ್ಯೋಗ | - | ವ್ಯವಸಾಯ |
| ವಿಳಾಸ | - | ಜಯಲಕ್ಷ್ಮಿಪುರ ಗ್ರಾಮ |

**<u>ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-</u>**

ಸಾಕ್ಷಿ ಒಂದು ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ಹೆಬ್ಬೆಟ್ಟು ಗುರುತನ್ನು ನೋಡಿ ತನ್ನ ಹೆಬ್ಬೆಟ್ಟು ಗುರುತು ಎಂದು ಗುರುತಿಸಿದ್ದು ಸದರಿ **ಪಂಚನಾಮೆಯನ್ನು ಈಗಾಗಲೇ** ನಿಪಿ-**2** ಎಂದು ಗುರುತಿಸಲಾಗಿದೆ.

ಪೊಲೀಸರು ನನ್ನ ಸಮಕ್ಷಮ ಸ್ಥಳ ಪಂಚನಾಮೆ ಮತ್ತು ಶವ ಪಂಚನಾಮೆ ಮಾಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ದಿ.**02.01.2025** ರಂದು ನನ್ನ ಹಾಗೂ ಚಾಸಾ-**1** ಮತ್ತು **4** ರವರ ಸಮಕ್ಷಮ ಪೊಲೀಸರು ನಿಪಿ- **2** ರ ಪ್ರಕಾರ ಮದ್ಯಾಹ್ನ **1.40** ಗಂಟೆಯಿಂದ **2.25** ಗಂಟೆವರೆಗೆ ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ.

ದಿ.**01.01.2025** ರಂದು ನನ್ನ ಹಾಗೂ ಚಾಸಾ-**5** ರಿಂದ **7** ರವರ ಸಮಕ್ಷಮ ಪೊಲೀಸರು ಮದ್ಯಾಹ್ನ **1.15** ಗಂಟೆಯಿಂದ **3.15** ಗಂಟೆವರೆಗೆ ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ.

ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ.ಆರ್.ಸಿ. ವಕೀಲರಿಂದಃ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **12.45** ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**